ಪ್ರಜಾವಾಣಿ

# ಜೈನ್ ವಿ.ವಿಗೆ ಪ್ರಶಸ್ತಿ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ತಂಡ ಚಂಡೀಗಡದಲ್ಲಿ ನಡೆದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿದೆ.

ಜೈನ್ ವಿ.ವಿ ತಂಡದ ದಾಮಿನಿ ಕೆ.ಗೌಡ 200ಮೀ ಬಟರ್‌ಫ್ಲೈ ವಿಭಾಗದಲ್ಲಿ ಒಂದು ಚಿನ್ನ ಹಾಗೂ 50ಮೀ, 100ಮೀ ಬಟರ್‌ಫ್ಲೈ, 200ಮೀ, 100ಮೀ ಬ್ಯಾಕ್‌ಸ್ಟ್ರೋಕ್, 100ಮೀ ಫ್ರೀಸ್ಟೈಲ್ ವಿಭಾಗಗಳಲ್ಲಿ ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದಾರೆ. ಮೀನಾಕ್ಷಿ ನಾಲ್ಕು ವಿಭಾಗಗಳಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

**ದಾಖಲೆ:** ಜೈನ್ ವಿಶ್ವವಿದ್ಯಾಲಯ ಪುರುಷರ ತಂಡ 4X400ಮೀ ಫ್ರೀಸ್ಟೈಲ್ ರಿಲೇ ವಿಭಾಗದಲ್ಲಿ (ಕಾಲ: 8.18.16) ಅಖಿಲ ಭಾರತ ಅಂತರ ವಿಶ್ವಾವಿದ್ಯಾಲಯಗಳ ದಾಖಲೆಯನ್ನು ಮುರಿಯುವ ಮೂಲಕ ಚಿನ್ನ ಗೆದ್ದುಕೊಂಡಿದೆ.



ಸಮಗ್ರ ಪ್ರಶಸ್ತಿ ಗೆದ್ದ ಜೈನ್ ವಿಶ್ವವಿದ್ಯಾಲಯದ ಈಜುಪಟುಗಳು (ನಿಂತವರು ಎಡದಿಂದ ಬಲಕ್ಕೆ); ದಾಮಿನಿ ಕೆ.ಗೌಡ, ಎಮ್.ಪೃಥ್ವಿ, ಆಂಡ್ರ್ಯೂ ರಾಜನ್, ಪಿ.ಚಂದ್ರು, ಶೃತಿ ಮಹಾಲಿಂಗಮ್ (ಕುಳಿತವರು). ಸಿ. ಸುರೇಶ್ (ದೈಹಿಕ ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರು), ಶಂಕರ್ (ಕ್ರೀಡಾ ನಿರ್ದೇಶಕರು), ಚೆನ್‌ರಾಜ್ ರಾಯ್‌ಚಂದ್ (ಜೈನ್ ವಿಶ್ವವಿದ್ಯಾಲಯ ಟ್ರಸ್ಟ್ ಅಧ್ಯಕ್ಷರು), ರಕ್ಷಿತ್ ಶೆಟ್ಟಿ, ವಿಕೆಆರ್ ಮೀನಾಕ್ಷಿ.